## **ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು–3**

ಸಂಖ್ಯೆ: ಎಸ್.1/ವಾ.ಪ/ಡಿಸೆಂಬರ್–2012/33/2012–13 ದಿನಾಂಕ 03–09–2012

### **ಅಧಿಸೂಚನೆ**

ವಿಷಯ : ಡಿಸೆಂಬರ್ 2012ರಲ್ಲಿ ನಡೆಯುವ ವಾಣಿಜ್ಯ ಪರೀಕ್ಷೆಗೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: ಡಿಸೆಂಬರ್ 2012ರ ವಾಣಿಜ್ಯ ಪರೀಕ್ಷೆಗಳ ತಾತ್ಕಾಲಿಕ ಕಾಲಸೂಚಿ ಪಟ್ಟಿ ಪ್ರಕಾರ (ಕ್ಯಾಲೆಂಡರ್ ಆಫ್ ಇವೆಂಟ್ಸ್)

--

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಡಿಸೆಂಬರ್ 2012ರಲ್ಲಿ ವಾಣಿಜ್ಯ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಕೆಳಕಂಡ ದಿನಾಂಕಗಳನ್ನು ನಿಗಧಿಪಡಿಸಿದೆ. ಈ ಪರೀಕ್ಷೆಗೆ ವಾಣಿಜ್ಯ ಸಂಸ್ಥೆಗಳಲ್ಲಿ ಅಭ್ಯಾಸ ಮಾಡುತ್ತಿರುವರು ಖಾಸಗಿ ಅಭ್ಯರ್ಥಿಗಳಾಗಿ ನೋಂದಣಿ ಪಡೆದಿರುವವರು ಮತ್ತು ಹಿಂದಿನ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿರುವವರು ಮಾತ್ರ ಮಾನ್ಯತೆ ಪಡೆದ ವಾಣಿಜ್ಯ ಶಾಲೆಗಳ ಮೂಲಕ ಅರ್ಜಿ ಸಲ್ಲಿಸಬಹುದು. ಆದರೆ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಸಹ ಫಲಿತಾಂಶ ಉತ್ತಮಪಡಿಸಿಕೊಳ್ಳಲು ಅನುಮತಿ ಪಡೆಯದೇ ಬೇರೆ ಸಂಸ್ಥೆಗಳಿಂದ ಮತ್ತೆ ಅದೇ ಪರೀಕ್ಷೆಗೆ ಕುಳಿತುಕೊಳ್ಳುತ್ತಿರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ. ಇಂತಹ ಅಭ್ಯರ್ಥಿಗಳು ಮಂಡಳಿಯ ನಿಯಮಾನುಸಾರ ಫಲಿತಾಂಶ ಉತ್ತಮಪಡಿಸಿಕೊಳ್ಳಲು ಅನುಮತಿ ಪಡೆಯದೇ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ. ಸಂಸ್ಥೆಯ ಪ್ರಾಚಾರ್ಯರು ವಿದ್ಯಾರ್ಥಿಗಳಿಂದ ಹಿಂದೆ ಯಾವುದೇ ಸಂಸ್ಥೆಯಿಂದ ಪರೀಕ್ಷೆಯನ್ನು ಕಟ್ಟಿ ಉತ್ತೀರ್ಣರಾಗಿರುವುದಿಲ್ಲ ಎಂಬ ಬಗ್ಗೆ ಕರಾರು ಪತ್ರವನ್ನು ಬರೆಸಿಕೊಂಡು ಪರೀಕ್ಷೆಗೆ ಕಟ್ಟಿಸಿಕೊಳ್ಳುವುದು. ಇಂತಹ ಪ್ರಕರಣಗಳು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳ ವಿರುದ್ಧ ಮತ್ತು ಸಂಸ್ಥೆಗಳ ವಿರುದ್ಧ ಮಂಡಳಿಯ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. ಮತ್ತು ಹಿಂದೆ ಉತ್ತೀರ್ಣರಾಗಿರುವ ವಿಷಯದ ಅಂಕಪಟ್ಟಿಯನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದು.

| ಕ್ರ ಸಂ. | ವಿವರಗಳು | ದಿನಾಂಕಗಳು |
|---|---|---|
| 1. | ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ. | 11–10–2012 |
| 2. | ಬ್ಯಾಂಕ್ ಹುಂಡಿಯನ್ನು ಪಡೆಯುವ ದಿನಾಂಕ | 12–10–2012 |
| 3. | ವಾಣಿಜ್ಯ ಶಾಲೆಗಳು ಅಭ್ಯರ್ಥಿಗಳಿಂದ ಸ್ವೀಕರಿಸಿದ ಮಾಹಿತಿಗೆ ಅನುಗುಣವಾಗಿ ವಿಷಯವಾರು ನಾಮಿನಲ್ ರೋಲ್‌ಗಳನ್ನು ನೇರವಾಗಿ ಪರೀಕ್ಷಾ ಮಂಡಳಿಗೆ ಸಲ್ಲಿಸಬೇಕಾದ ದಿನಾಂಕ (ತಲುಪಬೇಕಾದ ದಿನಾಂಕ) | 16–10–2012 |
| ಸೂಚನೆ : ದಂಡ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ. ಈಗ ನಿಗಧಿಪಡಿಸಿರುವ ದಿನಾಂಕವನ್ನೇ ಅಂತಿಮ ದಿನಾಂಕವೆಂದು ಪರಿಗಣಿಸುವುದು. | | |

ಡಿಸೆಂಬರ್ 2012ರ ವಾಣಿಜ್ಯ ಪರೀಕ್ಷೆಗೆ ನಾಮಯಾದಿ (N.R) Nominal Roll ಅಧಿಸೂಚನೆಯೊಂದಿಗೆ ಕಳುಹಿಸಲಾಗುತ್ತದೆ. ಈ ನಾಮಿನಲ್ ರೋಲ್‌ನಲ್ಲಿ ವಿಷಯವಾರು ಅಭ್ಯರ್ಥಿಗಳ ವೈಯಕ್ತಿಕ ಮತ್ತು ಪೂರ್ಣ ಮಾಹಿತಿಯನ್ನು ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿದ್ದಂತೆ **ವಿಷಯವಾರು** ಭರ್ತಿ ಮಾಡಿ ನಿಗಧಿಗೊಳಿಸಿದ ದಿನಾಂಕದೊಳಗೆ ಅವುಗಳನ್ನು ಪರೀಕ್ಷಾ ಮಂಡಳಿಗೆ ಕಳುಹಿಸುವುದು. ಸಂಸ್ಥೆಗಳಿಂದ ನಾಮಿನಲ್ ರೋಲ್ ಹಾಗೂ ಪರೀಕ್ಷಾ ಶುಲ್ಕ ಸಲ್ಲಿಸಿದ ನಂತರ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ O.M.R. ಶೀಟ್‌ಗಳನ್ನು ನಂತರ ಕಳುಹಿಸಿಕೊಡಲಾಗುವುದು. ಮಂಡಳಿಯಿಂದ ಒ.ಎಂ.ಆರ್. ಶೀಟ್‌ಗಳ ಸೂಚನಾಪತ್ರವನ್ನು O.M.R. ಶೀಟ್‌ಗಳನ್ನು ಪಡೆದನಂತರ ಅವುಗಳನ್ನು ಭರ್ತಿಮಾಡಿ ಕ್ರಮವಾಗಿ ಶೇಡ್ ಮಾಡಿ ಅಭ್ಯರ್ಥಿಯ ಪಾಸ್ ಪೋರ್ಟ್ ಸೈಜ್ ಭಾವಚಿತ್ರಗಳನ್ನು ಅಂಟಿಸಿ ಸಹಿ ಮಾಡಿಸಿ ಪ್ರಾಂಶುಪಾಲರ ದೃಢೀಕರಣದೊಂದಿಗೆ ನಿಗಧಿಪಡಿಸಿದ ಅವಧಿಯೊಳಗೆ ಈ ಕಛೇರಿಗೆ ಸಲ್ಲಿಸುವುದು.

ವಾಣಿಜ್ಯ ಶಾಲೆಗಳ ಪ್ರಾಚಾರ್ಯರುಗಳು ಅಭ್ಯರ್ಥಿಗಳಿಂದ ಪಡೆದ ಪರೀಕ್ಷಾ ಶುಲ್ಕದ ಮೊಬಲಗಿಗೆ **ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರುರವರ** ಹೆಸರಿಗೆ ಬೇಡಿಕೆ ಹುಂಡಿಯನ್ನು ಪಡೆದು ಅದನ್ನು ನಾಮಿನಲ್ ರೋಲ್‌ನೊಂದಿಗೆ ಮೇಲೆ ತಿಳಿಸಿರುವ ದಿನಾಂಕದೊಳಗೆ ನೇರವಾಗಿ ಶ್ರೀ.ಕೆ.ಎಂ.ಗುರುರಾಜ್, ಹಿರಿಯ ಸಹಾಯಕ ನಿರ್ದೇಶಕರು, **ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03,** ಈ ವಿಳಾಸಕ್ಕೆ ಕಳುಹಿಸುವುದು.

1. ಮಂಡಳಿ ನಿಗಧಿಪಡಿಸಿದ ದಿನಾಂಕಗಳು ಸರ್ಕಾರಿ ರಜಾ ದಿನವೆಂದು ಘೋಷಿಸಲ್ಪಟ್ಟಿದ್ದಲ್ಲಿ ಆದಿನಗಳ ಮಾರನೆಯ ಕೆಲಸದ ದಿನವನ್ನು ಕೊನೆಯ ದಿನವೆಂದು ಪರಿಗಣಿಸಲಾಗುವುದು.

2. ದಂಡ ಶುಲ್ಕ ಪಾವತಿ ಮಾಡಲು ಅವಕಾಶವಿರುವುದಿಲ್ಲ. ನಿಗಧಿಪಡಿಸಿರುವ ದಿನಾಂಕವೇ ಅಂತಿಮ ದಿನಾಂಕವೆಂದು ಪರಿಗಣಿಸತಕ್ಕದ್ದು.
3. ವಾಣಿಜ್ಯ ಶಾಲೆಯ ಪ್ರಸಕ್ತ ವರ್ಷದ ಮಾನ್ಯತೆ ಪಡೆದಿರುವುದಕ್ಕೆ ಸಂಬಂಧಿಸಿದ ಸಹನಿರ್ದೇಶಕರಿಂದ ಪಡೆದ ಜ್ಞಾಪನ ಪ್ರತಿ ಲಗತ್ತಿಸುವುದು.
4. ಡಿಸೆಂಬರ್ 2012ಕ್ಕೆ ಸಂಬಂಧಿಸಿದ ವಾಣಿಜ್ಯ ಶಾಲೆಗಳ ನವೀಕರಣ ಶುಲ್ಕ ರೂ.205–00ಗಳ ಡಿ.ಡಿಯನ್ನು, ಕಾರ್ಯದರ್ಶಿಗಳು, K.S.E.E.B ಬೆಂಗಳೂರುರವರಿಗೆ ಪಾವತಿ ಆಗುವಂತೆ ಬ್ಯಾಂಕ್ ಹುಂಡಿ ಪಡೆದು ತಪ್ಪದೆ ಲಗತ್ತಿಸುವುದು. ಈಗಾಗಲೇ ಬ್ಯಾಂಕ್ ಹುಂಡಿ ಸಲ್ಲಿಸಿದಲ್ಲಿ ಜೆರಾಕ್ಸ್ ಪ್ರತಿ ಲಗತ್ತಿಸುವುದು. ಪತ್ರ ವ್ಯವಹಾರಕ್ಕೆ ಅನುಕೂಲಕರವಾದ ಅಂಚೆ ವಿಳಾಸ, ದೂರವಾಣಿ ಸಂಖ್ಯೆ ಅಥವಾ ಮೊಬೈಲ್ ಫೋನ್ ಸಂಖ್ಯೆ ತಪ್ಪದೆ ನಮೂದಿಸುವುದು.

ವಿವಿಧ ದರ್ಜೆಗಳ ವಾಣಿಜ್ಯ ಪರೀಕ್ಷೆಗಳು ಡಿಸೆಂಬರ್ 2012ರಲ್ಲಿ ಪ್ರಾರಂಭವಾಗುವುದು. ಈ ಬಗ್ಗೆವಿವರವಾದ ವೇಳಾ ಪಟ್ಟಿಯನ್ನು ಮುಂದೆ ಪ್ರಕಟಿಸಲಾಗುವುದು. ಪ್ರಾಚಾರ್ಯರು ಅದನ್ನು ತಿಳಿದುಕೊಂಡು ಪರೀಕ್ಷೆಗೆ ಕುಳಿತುಕೊಳ್ಳುವ ಎಲ್ಲಾ ವಿದ್ಯಾರ್ಥಿಗಳಿಗೆ ತಿಳಿಯಪಡಿಸಬೇಕೆಂದು ತಿಳಿಸಿದೆ.

ಈ ಕೆಳಕಂಡ ವಿಷಯಗಳಲ್ಲಿ ಅಧಿಕೃತ ಪಠ್ಯ ಕ್ರಮದಂತೆ ಪರೀಕ್ಷೆಗಳನ್ನು ನಡೆಸಲಾಗುವುದು.

| ಪರೀಕ್ಷಾ ವಿಷಯಗಳು | ಡಿಸೆಂಬರ್ 2012ರ ಅವಧಿಯಲ್ಲಿ ನಡೆಸಲಾಗುವ ಪರೀಕ್ಷೆಯ ವಿಷಯ ಸಂಕೇತ ಮತ್ತು ದರ್ಜೆಗಳು | |
|---|---|---|
| | ವಿಷಯ ಸಂಕೇತದ ಸಂಖ್ಯೆ | |
| ಆಂಗ್ಲ ಮತ್ತು ಕನ್ನಡ ಬೆರಳಚ್ಚು | 03 XY, 08 XY | ಪ್ರೌಢ ದರ್ಜೆ |
| | 05 XY, 10 XY, | ಪ್ರಥಮ ದರ್ಜೆ |
| 11,13,14,15–ಆಂಗ್ಲ ಶೀಘ್ರಲಿಪಿ | 11 XYZ | ಪ್ರವೀಣ ದರ್ಜೆ |
| | 13 XYZ | ಪ್ರೌಢ ದರ್ಜೆ |
| | 14 XY | ಮಧ್ಯಮ ದರ್ಜೆ |
| | 15 XY | ಪ್ರಥಮ ದರ್ಜೆ |
| 16,18,20– ಕನ್ನಡ ಶೀಘ್ರಲಿಪಿ | 16 XYZ | ಪ್ರವೀಣ ದರ್ಜೆ |
| | 18 XYZ | ಪ್ರೌಢದರ್ಜೆ |
| | 20 XY | ಪ್ರಥಮ ದರ್ಜೆ |
| ಮುದ್ರಣ ಪರೀಕ್ಷೆಗಳು | 31 XY, 33 XY,35 XY, 37 XY | ಪ್ರೌಢದರ್ಜೆ |
| | 32XY,34 XY,36 XY, 38 XY | ಪ್ರಥಮ ದರ್ಜೆ |

ಬೆರಳಚ್ಚು ಹಾಗೂ ಶೀಘ್ರಲಿಪಿ ಕನ್ನಡ ಮತ್ತು ಆಂಗ್ಲ ವಿಷಯದಲ್ಲಿ ಪ್ರಥಮ. ಪ್ರೌಢ ಮತ್ತು ಪ್ರವೀಣ ದರ್ಜೆಗಳಲ್ಲಿ ಪಾಸಾದ ಒಂದು ವರ್ಷದ ಒಳಗಡೆ ಪರೀಕ್ಷೆಗೆ ಹಲವು ಪ್ರಾಂಶುಪಾಲರು ಅಭ್ಯರ್ಥಿಗಳನ್ನು ಪರೀಕ್ಷೆಗೆ ಕೂರಿಸುತ್ತಿರುವುದನ್ನು ಗಮನಿಸಲಾಗಿದೆ. ಇದು ಮಂಡಳಿಯ ನಿಯಮಕ್ಕೆ ವಿರುದ್ಧವಾಗಿದ್ದು ಇಂತಹ ವಿದ್ಯಾರ್ಥಿಗಳ ಅಂಕಪಟ್ಟಿ ರದ್ದುಪಡಿಸಲಾಗುವುದು ಹಾಗೂ ಸಂಸ್ಥೆಯ ಅನುಮತಿಯನ್ನು ಹಿಂಪಡೆಯಲಾಗುವುದು. ಇಂತಹ ಪ್ರಕರಣಗಳಿಗೆ ಪ್ರಾಂಶುಪಾಲರೇ ಕಾರಣರಾಗಿರುತ್ತಾರೆ. ಸಂಸ್ಥೆಯ ಪ್ರಾಂಶುಪಾಲರು ಈ ಬಗ್ಗೆ ಅಭ್ಯರ್ಥಿಗಳಿಂದ ಬೇರೆ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವುದಿಲ್ಲ. ಎಂಬ ಬಗ್ಗೆ ಮುಚ್ಚಳಿಕೆಯನ್ನು ಬರೆಸಿಕೊಂಡು ಪರೀಕ್ಷೆಗೆ ಕೂರಲು ಅವಕಾಶ ನೀಡುವುದು. ಒಂದು ವೇಳೆ ಇಂತಹ ಪ್ರಕರಣಗಳು ಕಂಡುಬಂದಲ್ಲಿ ಸಂಸ್ಥೆಯ ಅನುಮತಿಯನ್ನು ರದ್ದುಪಡಿಸಲು ಆಯುಕ್ತರಿಗೆ ವರದಿ ಮಾಡಲಾಗುವುದು.

<u>ವಿಷಯವಾರು ಪರೀಕ್ಷಾ ಶುಲ್ಕಗಳನ್ನು ಕೆಳಗಿನಂತೆ ನೀಡಲಾಗಿದೆ.</u>

## **ಶುಲ್ಕ ವಿವರ**

| ಕ್ರ. ಸಂ | ವಿಷಯಗಳು | ಪ್ರಥಮದರ್ಜೆ | ಮಧ್ಯಮ ದರ್ಜೆ | ಪ್ರೌಢ ದರ್ಜೆ | ಪ್ರವೀಣ ದರ್ಜೆ |
|---|---|---|---|---|---|
| 1. | ಆಂಗ್ಲ ಮತ್ತು ಕನ್ನಡ ಬೆರಳಚ್ಚು | 150–00 | – | 175–00 | 300–00 |
| 2. | ಆಂಗ್ಲ ಶೀಘ್ರಲಿಪಿ | 175–00 | 190–00 | 225–00 | 300–00 |
| 3. | ಕನ್ನಡ ಶೀಘ್ರಲಿಪಿ | 175–00 | – | 225–00 | 300–00 |
| 4 | ಮುದ್ರಣ ಪರೀಕ್ಷೆಗಳು | 200–00 | – | 220–00 | – |

ಶುಲ್ಕ ಪಾವತಿಸಿದ ಮತ್ತು ಶುಲ್ಕ ವಿನಾಯಿತಿ ಇರುವ ಅಭ್ಯರ್ಥಿಗಳು ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಶುಲ್ಕ ರೂ.5.00 ಮತ್ತು ಅಂಕಪಟ್ಟಿ ಶುಲ್ಕ ರೂ.5.00 ಒಟ್ಟು ರೂ.10.00 ನೀಡಬೇಕು. ಅಂದರೆ ಸರ್ಕಾರಿ ಆದೇಶ ಸಂಖ್ಯೆ: ಎನ್.ಡಬ್ಲ್ಯೂ.ಎಲ್.213 ಎಸ್.ಎ.85, ದಿನಾಂಕ 23.09.1999ರ ಪ್ರಕಾರ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಗ್ರೂಪ್–ಎ ಗೆ ಸೇರಿದ ವಿದ್ಯಾರ್ಥಿಗಳೂ ಅಂಕಪಟ್ಟಿಯ ಶುಲ್ಕ ಮತ್ತು ಅರ್ಜಿ ಶುಲ್ಕ ಒಟ್ಟು ರೂ.10.00 ಪಾವತಿಸಬೇಕು. ಸರ್ಕಾರಿ ಆದೇಶದಂತೆ ಸಂಬಂಧಿಸಿದ ಪ್ರಾಧಿಕಾರ ಹೊಂದಿದ ಅಧಿಕಾರಿಯಿಂದ ಪಡೆದ ಜಾತಿ ಪ್ರಮಾಣ ಪತ್ರದ ಮೂಲ ಪ್ರತಿ ಅಥವಾ ಪತ್ರಾಂಕಿತ ಅಧಿಕಾರಿಯಿಂದ ದೃಢೀಕರಿಸಿದ ನಕಲು ಪ್ರತಿಯನ್ನು ಸಂಸ್ಥೆಗಳ ಮೊಹರು ಹಾಗೂ ಪ್ರಾಂಶುಪಾಲರ ಸಹಿಯೊಂದಿಗೆ ಸಲ್ಲಿಸಬೇಕು. **ಸಲ್ಲಿಸದೆ ಶುಲ್ಕ ವಿನಾಯಿತಿ ಕೋರಿದಲ್ಲಿ ಅಂತಹವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಮುಂದಿನ ಸಮಸ್ಯೆಗಳಿಗೆ ಪ್ರಾಂಶುಪಾಲರೇ ಜವಾಬ್ದಾರರಾಗಿರುತ್ತಾರೆ.**

ಪರೀಕ್ಷೆಗೆ ವಿಷಯವಾರು ನಾಮಿನಲ್ ರೋಲ್‌ನ್ನು ಭರ್ತಿ ಮಾಡುವಾಗ ವಿದ್ಯಾರ್ಥಿಯ ಹೆಸರು, ತಂದೆಯ ಹೆಸರು ಮತ್ತು ಜನ್ಮ ದಿನಾಂಕವನ್ನು ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ನಮೂದಿಸಿರುವಂತೆ ತಪ್ಪಿಲ್ಲದೆ ಬರೆಯಬೇಕು. ಇದರಿಂದ ಮುಂದೆ ತಿದ್ದುಪಡಿ ಮಾಡಿಸುವ ತೊಂದರೆ ತಪ್ಪುತ್ತದೆ. ಆಂಗ್ಲ ಮತ್ತು ಕನ್ನಡ ಬೆರಳಚ್ಚು ಪರೀಕ್ಷೆಗಳಿಗೆ ತಂಡಗಳನ್ನು(ಬ್ಯಾಚ್) ಸರಿಯಾಗಿ ನಮೂದಿಸಬೇಕು. ಅಂದರೆ ಪ್ರಥಮ ದರ್ಜೆಗೆ ಎ.ಬಿ.ಸಿ.ಡಿ.ಇ. ತಂಡಗಳೆಂದು ಪ್ರೌಢ ದರ್ಜೆಗೆ ಎ.ಬಿ.ಸಿ.ಡಿ. ತಂಡಗಳೆಂದು ವಿಂಗಡಿಸಿ ನಿಮ್ಮ ಸಂಸ್ಥೆಗಳ ವಿದ್ಯಾರ್ಥಿಗಳನ್ನು ಎಲ್ಲಾ ಬ್ಯಾಚ್‌ಗಳಿಗೆ ಸಮನಾಗಿ ಹಂಚಬೇಕು. ತದನಂತರ ಈ ಬಗ್ಗೆ ಯಾವುದೇ ಬದಲಾವಣೆ ಬಂದಲ್ಲಿ ಮಂಡಳಿಯ ನಿಯಮದಂತೆ ದಂಡ ಶುಲ್ಕ ಪಾವತಿಸಬೇಕಾಗುತ್ತದೆ.

ಅರ್ಹತಾ ಪತ್ರಗಳ ನಕಲುಗಳನ್ನು (ಜೆರಾಕ್ಸ್ ಪ್ರತಿಗಳನ್ನು) ಪತ್ರಾಂಕಿತ ಅಧಿಕಾರಿಗಳಿಂದ ತಪ್ಪದೇ ದೃಢೀಕರಿಸಬೇಕು.

ವಿದ್ಯಾರ್ಥಿಗಳ ವಿಷಯವಾರು ನಾಮಿನಲ್ ರೋಲ್‌ಗಳನ್ನು ಮಂಡಳಿಗೆ ಕಳುಹಿಸುವುದಕ್ಕೆ ಮುಂಚೆ ಪ್ರಾಚಾರ್ಯರು ಈ ಕೆಳಕಂಡ ವಿಷಯಗಳನ್ನು ಗಮನಿಸಬೇಕು.

1. ಸರ್ಕಾರಿ ಆದೇಶ ಸಂಖ್ಯೆ: ಇಡಿ 4 ಎಲ್‌ಸಿಇ 2002, ಬೆಂಗಳೂರು ದಿನಾಂಕ: 28.01.2003 ಪ್ರಕಾರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಆಂಗ್ಲ ಅಥವಾ ಕನ್ನಡ ಬೆರಳಚ್ಚು (ಜೂನಿಯರ್) ಪ್ರಥಮ ದರ್ಜೆಗೆ ಹಾಜರಾಗಲು ಅರ್ಹತೆ ಪಡೆದಿರುತ್ತಾರೆ.
2. ಕನ್ನಡ ಮತ್ತು ಆಂಗ್ಲ ಬೆರಳಚ್ಚು ಸೀನಿಯರ್ ಪರೀಕ್ಷೆಗೆ ಕೂರಲು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತೀರ್ಣರಾಗಿರಬೇಕು ಮತ್ತು ಸೀನಿಯರ್ ಬೆರಳಚ್ಚು ಮತ್ತು ಸೀನಿಯರ್ ಶೀಘ್ರಲಿಪಿ ಪರೀಕ್ಷೆಗಳನ್ನು ಕಟ್ಟಲು ಜೂನಿಯರ್ ಬೆರಳಚ್ಚು ಮತ್ತು ಜೂನಿಯರ್ ಶೀಘ್ರಲಿಪಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ 10 ತಿಂಗಳು ಪೂರ್ಣಗೊಳಿಸಿರಬೇಕು. ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಅಭ್ಯರ್ಥಿಗಳ ಫಲಿತಾಂಶವನ್ನು ನೀಡಲಾಗುವುದಿಲ್ಲ. ಮತ್ತು ಅಂತಹ ಸಂಸ್ಥೆಗಳ ಪ್ರಾಂಶುಪಾಲರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
3. ದಂಡ ಶುಲ್ಕ ವಿಧಿಸಿ ಅರ್ಜಿ **ಸ್ವೀಕರಿಸುವ ಪದ್ಧತಿಯನ್ನು ತಕ್ಷಣದಿಂದ ಕೈಬಿಡಲಾಗಿದೆ.** ಆದುದರಿಂದ ಅಧಿಸೂಚನೆಯಲ್ಲಿ ನಿಗಧಿಪಡಿಸಿದ ಕೊನೆಯ ದಿನಾಂಕವಾದ ಮೇಲೆ ಹಣವನ್ನು ಕಟ್ಟಿದರೂ ಸಹ ಯಾವ ಕಾರಣದಿಂದಲೂ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ತಡವಾಗಿ ಪರೀಕ್ಷಾ ಶುಲ್ಕವನ್ನು ಕಟ್ಟಿದ ಅರ್ಜಿಗಳನ್ನು ಕಳುಹಿಸಿದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು, ಹಾಗೂ ಕಟ್ಟಿದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅನಂತರ ಈ ಬಗ್ಗೆ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ.
4. ಒ.ಎಂ.ಆರ್.ಶೀಟ್‌ಗೆ (ಒ.ಎಂ.ಆರ್. ಶೀಟ್‌ಗಳನ್ನು ಸಂಸ್ಥೆಗೆ ನಂತರ ಕಳುಹಿಸಿಕೊಡಲಾಗುವುದು.) ಅಭ್ಯರ್ಥಿಯ ಭಾವಚಿತ್ರವನ್ನು ಅಂಟಿಸಬೇಕಾಗಿರುವುದರಿಂದ 2 ಭಾವಚಿತ್ರಗಳನ್ನು ಪಡೆದು ಸಂಸ್ಥೆಯಲ್ಲಿ ಕಾಯ್ದಿರಿಸಬೇಕು.

5. ಅಂಕಗಳನ್ನು ಮರು ಎಣಿಕೆಗೆ ಅರ್ಜಿ ಹಾಕಿರುವ ವಿದ್ಯಾರ್ಥಿಗಳು ಮರು ಎಣಿಕೆ ಫಲಿತಾಂಶಕ್ಕಾಗಿ ಕಾಯಬಾರದು. ಅಂತಹ ವಿದ್ಯಾರ್ಥಿಗಳು ನಿಗಧಿಪಡಿಸಿದ ಅವಧಿಯೊಳಗೆ ಪರೀಕ್ಷಾ ಶುಲ್ಕವನ್ನು ಕಟ್ಟಬೇಕು. ಫಲಿತಾಂಶ ಬದಲಾವಣೆಯಾದ ಪಕ್ಷದಲ್ಲಿ ಇಂತಹ ವಿದ್ಯಾರ್ಥಿಗಳಿಗೆ ಮಾತ್ರ ಕಟ್ಟಿದ ಶುಲ್ಕವನ್ನು ಹಿಂದಿರುಗಿಸಲಾಗುವುದು.
6. ಒಮ್ಮೆ ಕಟ್ಟಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ ಅಥವಾ ಇತರೆ ಪರೀಕ್ಷೆಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
7. ರೆಗ್ಯುಲರ್ ವಿದ್ಯಾರ್ಥಿಗಳ ಅರ್ಜಿಗಳನ್ನು ಸಲ್ಲಿಸುವಾಗ ಎಸ್.ಎಸ್.ಎಲ್.ಸಿ ಯ ಅಂಕಪಟ್ಟಿಯ ನಕಲು ಪ್ರತಿಯನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು. ನಿಮ್ಮ ಸಂಸ್ಥೆಯಿಂದ ಪ್ರಾಂಶುಪಾಲರು ಮಾನ್ಯತೆ ಇಲ್ಲದಿರುವ ವಿಷಯಗಳಿಗೆ ಅರ್ಜಿಗಳನ್ನು ಕಳುಹಿಸಬಾರದು.
8. ಪ್ರಸಕ್ತ ಸಾಲಿಗೆ ಮಾನ್ಯತೆ ನವೀಕರಿಸಿದ ಬಗ್ಗೆ ಮಾನ್ಯತೆ ಪ್ರತಿಯನ್ನು ಲಗತ್ತಿಸಬೇಕು. ಒಂದು ಪಕ್ಷ ಶಾಶ್ವತ ಮಾನ್ಯತೆ ಪ್ರತಿ ಅಥವಾ ಮಾನ್ಯತೆ ನವೀಕರಿಸಿದ ಪ್ರತಿ ಕಳುಹಿಸದೆ ಇದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
9. ವಾಣಿಜ್ಯ ಪರೀಕ್ಷೆಯ ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಇಚ್ಛಿಸುವ ವಿದ್ಯಾರ್ಥಿಗಳಿಂದ ನಿಗಧಿತ ಶುಲ್ಕ ರೂ.100.00 ಗಳೊಂದಿಗೆ ಅರ್ಜಿ ಸಲ್ಲಿಸಿ ಮಂಡಳಿಯಿಂದ ಅನುಮತಿ ಪಡೆದು ಜೂನ್2012ರ ವಾಣಿಜ್ಯ ಪರೀಕ್ಷೆಗೆ ಅರ್ಜಿಗಳ ಜೊತೆಯಲ್ಲಿ ಕಳುಹಿಸುವುದು. ಫಲಿತಾಂಶ ಪಟ್ಟಿ ಪಡೆದ 15 ದಿನಗಳೊಳಗಾಗಿ ಫಲಿತಾಂಶ ಉತ್ತಮಪಡಿಸಿಕೊಳ್ಳಲು ಅರ್ಜಿ ಸಲ್ಲಿಸುವುದು.
10. (11) ಆಂಗ್ಲ ಶೀಘ್ರಲಿಪಿ ಪ್ರವೀಣ ದರ್ಜೆ ಮತ್ತು (16) ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆ ಪರೀಕ್ಷೆಗಳು, ಬೆಂಗಳೂರಿನಲ್ಲಿ ವಾಣಿಜ್ಯ ಪರೀಕ್ಷಾ ಕೇಂದ್ರ: 09–ಎಎನ್ ಇಲ್ಲಿ ಮಾತ್ರ ನಡೆಸಲಾಗುತ್ತದೆ. ಕೇಂದ್ರ ಬದಲಾವಣೆಗೆ ಅವಕಾಶವಿಲ್ಲ.
11. ನಿಗಧಿಪಡಿಸಿದ ಕೇಂದ್ರಗಳಲ್ಲಿ ಮಂಡಳಿಯ ನಿಯಮಾನುಸಾರ ಅಭ್ಯರ್ಥಿಗಳ ಸಂಖ್ಯೆ ಇಲ್ಲದೇಇದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಹತ್ತಿರವಿರುವ ಯಾವುದಾದರೂ ಕೇಂದ್ರಕ್ಕೆ ಲಗತ್ತಿಸಲಾಗುವುದು.
12. ಅತ್ಯಂತ ಕಡಿಮೆ ಅವಧಿಯಲ್ಲಿ ಅಭ್ಯರ್ಥಿಗಳನ್ನು ಸಂಪರ್ಕಿಸಲು ಅನುಕೂಲವಾಗುವಂತೆ ವಾಣಿಜ್ಯ ಸಂಸ್ಥೆಯವರು ಪರೀಕ್ಷೆಗೆ ಕುಳಿತುಕೊಳ್ಳುವ ಅಭ್ಯರ್ಥಿಗಳ ಮನೆ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನು ತಮ್ಮ ತಮ್ಮ ವಾಣಿಜ್ಯ ಶಾಲೆಗಳ ವಹಿಯಲ್ಲಿ ಯಾವಾಗಲೂ ಕಾಯ್ದಿರಿಸತಕ್ಕದ್ದು. ಇದು ಆಯಾ ವಾಣಿಜ್ಯ ಶಾಲೆಗಳ ಪ್ರಾಂಶುಪಾಲರ ಆಧ್ಯ ಕರ್ತವ್ಯವೆಂದು ಪರಿಗಣಿಸುವುದು.
13. ವಾಣಿಜ್ಯ ಪರೀಕ್ಷೆಯ ಅರ್ಜಿಗಳನ್ನು ಕಳುಹಿಸುವಾಗ ವಾಣಿಜ್ಯ ಸಂಸ್ಥೆಯ ಪತ್ರದಲ್ಲಿ ಸ್ಪಷ್ಟವಾಗಿ ಶಾಲಾ ಸಂಕೇತ, ಪಿನ್ ಕೋಡ್ ನಂಬರ್‌ನೊಂದಿಗೆ, ಪೂರ್ಣ ವಿಳಾಸ, ತಾಲ್ಲೂಕು ಮತ್ತು ಜಿಲ್ಲೆಯ ಹೆಸರನ್ನು ತಪ್ಪದೆ ನಮೂದಿಸಿ ಕಳುಹಿಸತಕ್ಕದ್ದು. ಕೆಲವು ಹೊಸ ಜಿಲ್ಲೆಗಳು ಉಂಟಾಗಿದ್ದು ಸದರಿ ಜಿಲ್ಲೆಗಳ ಹೆಸರನ್ನು ಹೆಸರಿಸುವುದು. ಮತ್ತು ಪ್ರಾಚಾರ್ಯರ ಮೊಬೈಲ್ ಅಥವಾ ದೂರವಾಣಿ ಸಂಖ್ಯೆಯನ್ನು ತಪ್ಪದೇ ನಮೂದಿಸತಕ್ಕದ್ದು.
13. ತಮ್ಮ ಸಂಸ್ಥೆಗಳಲ್ಲಿ ಯಾರೂ ಪರೀಕ್ಷೆಗೆ ತೆಗೆದುಕೊಳ್ಳದೇ ಇದ್ದಲ್ಲಿ ಶೂನ್ಯ ವರದಿಯನ್ನು ಸಲ್ಲಿಸಲು ತಿಳಿಸಿದೆ.

ವಾಣಿಜ್ಯ ಶಾಲಾವಾರು ಭರ್ತಿ ಮಾಡಿರುವ ವಿಷಯವಾರು ನಾಮಿನಲ್ ರೋಲ್‌ನ್ನು ವಿಷಯ, ವಿಷಯ ಸಂಕೇತ, ಇತ್ಯಾದಿ ಪರಿಶೀಲಿಸಿದ ನಂತರ ಪ್ರತಿ ನಾಮಿನಲ್ ರೋಲಿನಲ್ಲಿ ಪ್ರಾಚಾರ್ಯರು ಸಹಿ ಮಾಡಿರಬೇಕು. ಯಾವುದೇ ಕಾರಣಕ್ಕೂ ಪಡಿಯಚ್ಚು (ಫ್ಯಾಸಿಮಿಲಿ) ಉಪಯೋಗಿಸಬಾರದು. ಪಡಿಯಚ್ಚು ಉಪಯೋಗಿಸಿ ಕಳುಹಿಸಲಾದ ನಾಮಿನಲ್ ರೋಲನ್ನು ತಿರಸ್ಕರಿಸಲಾಗುವುದು.

(ಸಹಿ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

**<u>ಪ್ರತಿಗಳು :</u>**

1) ರಾಜ್ಯದ ಎಲ್ಲಾ ವಾಣಿಜ್ಯ ಶಾಲೆಗಳ ಪ್ರಾಚಾರ್ಯರುಗಳಿಗೆ ಮುಂದಿನ ಕ್ರಮಕ್ಕಾಗಿ.
3) ರಾಜ್ಯದ ಎಲ್ಲಾ ವಿಭಾಗೀಯ ಮಟ್ಟದ ಪ್ರಾದೇಶಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಗಳಿಗೆ ಕ್ರಮಕ್ಕಾಗಿ,
4) ನಿರ್ದೇಶಕರು (ಇ.ಪ) ಕಾರ್ಯದರ್ಶಿಗಳು ಆಪ್ತ ಶಾಖೆಗೆ.
5) ಶಾಖಾಧಿಕಾರಿಗಳು ಕಂಪ್ಯೂಟರ್ ಶಾಖೆರವರಿಗೆ ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
6) ಕಛೇರಿ ಪ್ರತಿ.

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು–3

ಸಂಖ್ಯೆ: ಎಸ್.1/ವಾಣಿಜ್ಯ.ಪ./ಖಾ.ಅ.ನೋ/27/2011–12 ದಿನಾಂಕ : 30–08–2012

**: ಸುತ್ತೋಲೆ :**

ವಿಷಯ : ಡಿಸೆಂಬರ್ 2012ರ ಮಾಹೆಯಲ್ಲಿ ನಡೆಯಲಿರುವ ವಾಣಿಜ್ಯ ಪರೀಕ್ಷೆಗೆ
ಖಾಸಗಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

––

ಜೂನ್ 2012ರ ಮಾಹೆಯಲ್ಲಿ ನಡೆಯಲಿರುವ ವಾಣಿಜ್ಯ ಪರೀಕ್ಷೆಗಳಾದ ಆಂಗ್ಲ ಮತ್ತು ಕನ್ನಡ ಬೆರಳಚ್ಚು ಹಾಗೂ ಶೀಘ್ರಲಿಪಿ ವಿಷಯಗಳ ಪರೀಕ್ಷೆಗಳಿಗೆ **ಖಾಸಗಿಯಾಗಿ ಕುಳಿತುಕೊಳ್ಳಲು** ಬಯಸುವ ಅಭ್ಯರ್ಥಿಗಳು ತಮಗೆ ಹತ್ತಿರವಿರುವ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದಾದರೂ ವಾಣಿಜ್ಯ ಶಾಲೆಗಳ ಮೂಲಕ ನಿಗಧಿಪಡಿಸಿದ ಅರ್ಜಿ ನಮೂನೆಗಳಲ್ಲಿ ನಿರ್ದೇಶಕರು (ಇತರೆ ಪರೀಕ್ಷೆಗಳು) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು–03ಗೆ ಕಳುಹಿಸಿ ನೋಂದಣಿ ಮಾಡಿದ ಬಗ್ಗೆ ನೋಂದಣಿ ಪ್ರಮಾಣ ಪತ್ರ (ಎನ್‌ರೋಲ್‌ಮೆಂಟ್ ಸರ್ಟಿಫಿಕೇಟ್)ವನ್ನು ಪಡೆಯುವುದು.

1. ಅರ್ಜಿಫಾರಂ ಶುಲ್ಕ ರೂ.05.00 ಮತ್ತು ನೋಂದಣಿ ಶುಲ್ಕ ರೂ.150.00 ಒಟ್ಟು ರೂ.155.00 (ಒಂದು ನೂರಾ ಐವತ್ತೈದು ರೂಪಾಯಿಗಳು ಮಾತ್ರ) ಗಳನ್ನು ದಂಡವಿಲ್ಲದೆ ಪಾವತಿ ಮಾಡಲು ಕೊನೆಯ ದಿನಾಂಕವನ್ನು ಕೆಳಕಂಡಂತೆ ನಿಗಧಿ ಪಡಿಸಿದೆ.

| ಕ್ರ. ಸಂ | ವಿವರಗಳು | ದಿನಾಂಕಗಳು |
|---|---|---|
| 1 | ನೋಂದಣಿಶುಲ್ಕವನ್ನು ಅಭ್ಯರ್ಥಿಗಳಿಂದ ಸ್ವೀಕರಿಸಲು ಕೊನೆಯ ದಿನಾಂಕ | 28–09–2012 |
| 2 | ನೋಂದಣಿ ಶುಲ್ಕದ ಬ್ಯಾಂಕ್ ಹುಂಡಿ (ಡಿ.ಡಿ) ಯನ್ನು ತೆಗೆಸಲು ಕೊನೆಯ ದಿನಾಂಕ | 29–09–2012 |
| 3 | ನೋಂದಣಿ ಅರ್ಜಿ ನಮೂನೆಗಳನ್ನು ಪರೀಕ್ಷಾ ಶುಲ್ಕದೊಂದಿಗೆ ಮಂಡಳಿಗೆ ಕಳುಹಿಸಲು ಕೊನೆಯ ದಿನಾಂಕ | 01–10–2012 |

**ವಿಶೇಷ ಸೂಚನೆ :** ದಂಡ ಪಾವತಿಸಲು ಅವಕಾಶವಿರುವುದಿಲ್ಲ ಆದ್ದರಿಂದ ನಿಗಧಿಪಡಿಸಿದ ದಿನಾಂಕವನ್ನೇ ಅಂತಿಮ ದಿನಾಂಕವೆಂದು ಪರಿಗಣಿಸುವುದು.

2. ಈ ಕೆಳಗೆ ಸೂಚಿಸಿರುವ ಪ್ರಕರಣಗಳಲ್ಲಿ ಮಾತ್ರ ಖಾಸಗಿಯಾಗಿ ಈ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹರಾಗಿರುತ್ತಾರೆ.
   ಅ) ಅಭ್ಯರ್ಥಿಯು ಯಾವುದಾದರೂ ವಾಣಿಜ್ಯ ಶಾಲೆಯಲ್ಲಿ ಕನಿಷ್ಠ ಎರಡು (2) ವರ್ಷ ಸೇವೆ ಸಲ್ಲಿಸಿದ ಅನುಭವವಿರಬೇಕು. ಸಂಬಂಧಿಸಿದ ದಾಖಲೆ ಲಗತ್ತಿಸಿರಬೇಕು.
   ಆ) ಯಾವುದೇ ಸರ್ಕಾರಿ / ಸ್ಥಳಿಯ ಸಂಸ್ಥೆ / ರಿಜಿಸ್ಟರ್ಡ್ ಖಾಸಗಿ ಸಂಸ್ಥೆಗಳಲ್ಲಿ ಕೊನೆಯ ಪಕ್ಷ ಮೂರು ವರ್ಷ ಸೇವೆಯನ್ನು ಸಲ್ಲಿಸಿದವರಾಗಿರಬೇಕು ಮತ್ತು ಅವರು ಕೆಲಸ ಮಾಡುವ ಕಛೇರಿಯ ವೇಳೆಯು ಅವರಿಗೆ ಹತ್ತಿರವಿರುವ ವಾಣಿಜ್ಯ ಶಾಲೆಗೆ ಹೋಗಲು ಅನುಕೂಲವಾಗಿರಬೇಕು. ಅಲ್ಲದೆ ತಮ್ಮ ಅಧಿಕಾರಿಯಿಂದ ಪಡೆದ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು.

**ಸೂಚನೆ :** ಈ ಮೇಲ್ಕಂಡ ಎರಡು ವರ್ಗಗಳಲ್ಲದೆ ಬೇರೆಯವರಿಂದ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

3. ನಿಗಧಿಪಡಿಸಿದ ಅರ್ಜಿ ನಮೂನೆಯನ್ನು ನಿಮ್ಮ ವ್ಯಾಪ್ತಿಗೆ ಬರುವ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಕರ್ನಾಟಕ ಪ್ರಾದೇಶಿಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು/ ಮೈಸೂರು /ಗುಲ್ಬರ್ಗಾ/ ಬೆಳಗಾಂ ಈ ವಿಳಾಸಕ್ಕೆ ಅಂಚೆ ಚೀಟಿ ಹಚ್ಚಿದ ಸ್ವಯಂ ವಿಳಾಸವಿರುವ ಲಕೋಟೆಯನ್ನು ಕಳುಹಿಸಿ ಪಡೆಯಬಹುದು.

4. ಭರ್ತಿ ಮಾಡಿದ ಅರ್ಜಿ ನಮೂನೆ ಜೊತೆಗೆ ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಈ ಹೆಸರಿಗೆ ಯಾವುದಾದರು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ರೂ.155.00 (ಒಂದು ನೂರಾ ಐವತ್ತೈದು ರೂಪಾಯಿಗಳು ಮಾತ್ರ) ಗಳ ಅಡ್ಡಗೆರೆ ಹಾಕಿದ ಬೇಡಿಕೆ ಹುಂಡಿಯನ್ನು (ಕ್ರಾಸ್ಡ್ ಡಿಮ್ಯಾಂಡ್ ಡ್ರಾಫ್ಟ್) ಪಡೆದು ನೋಂದಣಿ ಮಾಡಲು ಸಲ್ಲಿಸಬೇಕಾದ ಶುಲ್ಕ, ಅರ್ಜಿ ಮತ್ತು ಇತರೆ ಅವಶ್ಯಕವಾದ ದಾಖಲೆಗಳೊಂದಿಗೆ ಹತ್ತಿರವಿರುವ ಸರ್ಕಾರದಿಂದ ಮಾನ್ಯತೆ ಪಡೆದ ವಾಣಿಜ್ಯ ಶಾಲೆಯ ಮುಖಾಂತರ ಕಳುಹಿಸತಕ್ಕದ್ದು. (ದಂಡ ಸಹಿತ ಅರ್ಜಿಗಳನ್ನು ಸ್ವೀಕರಿಸುವ ಪದ್ದತಿಯನ್ನು ಕೈಬಿಡಲಾಗಿದೆ. ಕೊನೆಯ ದಿನಾಂಕವನ್ನು ಯಾವುದೇ ಕಾರಣದಿಂದ ಮುಂದೂಡುವುದಿಲ್ಲ).
5. ಖಾಸಗಿಯಾಗಿ ಬೆರಳಚ್ಚು ಅಥವಾ ಶೀಘ್ರಲಿಪಿ ಪ್ರೌಢ ದರ್ಜೆ ಪರೀಕ್ಷೆಗೆ ಕುಳಿತುಕೊಳ್ಳಲು ಬಯಸುವವರು ಸಂಬಂಧಪಟ್ಟ ವಿಷಯದ ಪ್ರಥಮ ದರ್ಜೆ ಪರಿಕ್ಷೆಯಲ್ಲಿ ಒಂದು ವರ್ಷ ಮುಂಚಿತವಾಗಿ ಉತ್ತೀರ್ಣರಾಗಿರಬೇಕು.
6. ಖಾಸಗಿಯಾಗಿ ವಾಣಿಜ್ಯ ಪರೀಕ್ಷೆಗೆ ಕುಳಿತುಕೊಳ್ಳಲು ಬಯಸುವ ವಿದ್ಯಾರ್ಥಿ ; ವಿದ್ಯಾರ್ಥಿನಿಯರು **ಮಾರ್ಚ್–2011 ತಿಂಗಳಲ್ಲಿ ಅಥವಾ ಅದಕ್ಕಿಂತ ಮುಂಚಿತವಾಗಿಯೇ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಮತ್ತು ಅಗತ್ಯ ಪ್ರಮಾಣ ಪತ್ರದ ನಕಲನ್ನು ಲಗತ್ತಿಸುವುದು.**
7. **ವಿದ್ಯಾರ್ಥಿಗಳು ವಾಸಿಸುವ ಸಂಬಂಧಪಟ್ಟ ತಾಲ್ಲೂಕು ತಹಸೀಲ್ದಾರ್ ರಿಂದ ಪಡೆದ ವಾಸಸ್ಥಳದ ಪ್ರಮಾಣ ಪತ್ರದ ಮೂಲ ಪತ್ರದ ಪ್ರತಿಯನ್ನು ಮತ್ತು ವಿದ್ಯಾರ್ಹತೆ ಪ್ರಮಾಣ ಪತ್ರದ ಪ್ರತಿಯನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಕಳುಹಿಸುವುದು.**
8. ನೋಂದಣಿ ಮಾಡಿಸಲು ಯಾವ ವಾಣಿಜ್ಯ ಶಾಲೆಯಿಂದ ನೋಂದಣಿ ಅರ್ಜಿಯನ್ನು ಕಳುಹಿಸಿರುತ್ತಾರೆಯೋ, ಅದೇ ವಾಣಿಜ್ಯ ಶಾಲೆಗೆ ಅರ್ಹತೆ ಪಡೆದವರ ನೋಂದಣಿ ಪತ್ರವನ್ನು (ಎನ್‌ರೋಲ್‌ಮೆಂಟ್ ಸರ್ಟಿಫಿಕೇಟ್) ಕಳಿಸಲಾಗುತ್ತದೆ.
9. ನಿಗಧಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
10. ವಾಣಿಜ್ಯ ಶಾಲೆಯ ಪ್ರಾಚಾರ್ಯರು ತಮಗೆ ಬಂದ ಎಲ್ಲಾ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ನೇರವಾಗಿ ಹಿರಿಯ ಸಹಾಯಕ ನಿದೇಶಕರು (ವಾಣಿಜ್ಯ ವಿಭಾಗ) ಕರ್ನಾಟಕ ಪ್ರಾಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು–03 ಈ ವಿಳಾಸಕ್ಕೆ ಕಳುಹಿಸತಕ್ಕದ್ದು. ಈ ಸಂಬಂಧದಲ್ಲಿ ನಿಗಧಿತ ದಿನಾಂಕದೊಳಗೆ ಯಾವುದೇ ಅರ್ಜಿಯೂ ಪ್ರಾಚಾರ್ಯರುಗಳಿಂದ ಬಾರದಿದ್ದಲ್ಲಿ ಶೂನ್ಯ ವರದಿಯನ್ನು ಸಲ್ಲಿಸಬೇಕು.

(ಸಹಿ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಪ್ರತಿಗಳನ್ನು :–**

1. ನಿರ್ದೇಶಕರು : ಕಾರ್ಯದರ್ಶಿಗಳ ಆಪ್ತ ಶಾಖೆಗೆ.
2. ವಿಭಾಗೀಯ ಮಟ್ಟದ ಎಲ್ಲಾ ಕಾರ್ಯದರ್ಶಿಗಳಿಗೆ ಹಾಗೂ ಪದನಿಮಿತ್ತ ಸಹನಿರ್ದೇಶಕರುಗಳಿಗೆ,
3. ಕರ್ನಾಟಕ ರಾಜ್ಯದ ಮಾನ್ಯತೆ ಪಡೆದ ಎಲ್ಲಾ ವಾಣಿಜ್ಯ ಶಾಲೆಗಳ ಪ್ರಾಚಾರ್ಯರುಗಳಿಗೆ.
4. ಶಾಖಾಧಿಕಾರಿಗಳು ಕಂಪ್ಯೂಟರ್ ಶಾಖೆರವರಿಗೆ ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
5. ಕಛೇರಿ ಪ್ರತಿ.

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-3**

ಸಂಖ್ಯೆ:ಎಸ್1-ವಾ.ಪ.ಫ/ಜುಲೈ 2012/31/12-13 ದಿನಾಂಕ: 06-09-2012

**ಸು ತ್ತೋ ಲೆ**

ವಿಷಯ:- ಜುಲೈ 2012ರ ಮಾಹೆಯಲ್ಲಿ ನಡೆದ ವಾಣಿಜ್ಯ ಪರೀಕ್ಷೆಯ ಫಲಿತಾಂಶ ಪ್ರಕಟಿಸುವ ಬಗ್ಗೆ

~~~~

ಜುಲೈ 2012ರಲ್ಲಿ ನಡೆದ ವಾಣಿಜ್ಯ ಪರೀಕ್ಷಾ ಫಲಿತಾಂಶ ಪಟ್ಟಿಯನ್ನು ಕಳುಹಿಸಿಕೊಡಲಾಗಿದೆ. ಸದರಿ ಫಲಿತಾಂಶವನ್ನು ಎಲ್ಲಾ ವಾಣಿಜ್ಯ ಸಂಸ್ಥೆಗಳಲ್ಲಿ ದಿನಾಂಕ: 20-09-2012ರಂದು ಬೆಳಿಗ್ಗೆ 11.00 ಘಂಟೆಗೆ ಏಕಕಾಲದಲ್ಲಿ ಪ್ರಕಟಿಸಲು ತಿಳಿಸಿದೆ. ಹಾಗೂ ಈ ಕೆಳಕಂಡ ಅಂಶಗಳ ಬಗ್ಗೆ ಗಮನ ಹರಿಸಲು ಸೂಚಿಸಿದೆ.

ಫಲಿತಾಂಶ ಪಟ್ಟಿಯಲ್ಲಿ ತಪ್ಪಾಗಿ ನಮೂದಿತವಾಗಿದ್ದಲ್ಲಿ ಅಂತಹ ಫಲಿತಾಂಶಗಳನ್ನು ನಿಯಮದಂತೆ ತಿದ್ದುಪಡಿ ಮಾಡಿ ಆ ಬಗ್ಗೆ ಅವಶ್ಯವೆನಿಸಿದಲ್ಲಿ ಕಾನೂನಿಗನುಗುಣವಾಗಿ ದೃಢಪಡಿಸಿ ತಿದ್ದುಪಡಿ ಮಾಡುವ ಅಧಿಕಾರವನ್ನು ಪರೀಕ್ಷಾ ಮಂಡಳಿಯು ಹೊಂದಿರುತ್ತದೆ. ವಿಶೇಷ ಪರಿಸ್ಥಿತಿಯ ಪ್ರಕರಣಗಳಲ್ಲಿ ಅಂದರೆ ಪರೀಕ್ಷೆಯ ದುರಾಚರಣೆ ವಂಚನೆ, ಅನುಚಿತ ವರ್ತನೆ,(ಎಂ.ಎಲ್.ಪಿ) ಇತರೆ ಗೊಂದಲ ಮೊದಲಾದವುಗಳಿಂದ ಪ್ರಭಾವಿತವಾಗಿದೆ ಎಂದು ಕಂಡುಬಂದಲ್ಲಿ ಅಂತಹ ಫಲಿತಾಂಶವನ್ನು ಪರೀಕ್ಷಾ ಫಲಿತಾಂಶ ಪ್ರಕಟವಾದ 60 ದಿನಗಳ ನಂತರವೂ ತಿದ್ದುಪಡಿ ಮಾಡುವ ಅಧಿಕಾರವನ್ನು ಪರೀಕ್ಷಾ ಮಂಡಳಿ ಹೊಂದಿರುತ್ತದೆ.

2009-10ನೇ ಸಾಲಿನ ಪರೀಕ್ಷೆಯಿಂದ ಉತ್ತರ ಪತ್ರಿಕೆಗಳಲ್ಲಿನ ಅಂಕಗಳ ಮರು ಎಣಿಕೆ ಸೌಲಭ್ಯದೊಂದಿಗೆ ಉತ್ತರ ಪತ್ರಿಕೆಗಳ ಛಾಯಾ ಪ್ರತಿ ಮತ್ತು ಮರು ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಲಾಗಿದೆ. ಮರು ಎಣಿಕೆಗೆ ಅರ್ಜಿ ಸಲ್ಲಿಸಿದ್ದಲ್ಲಿ, ಉತ್ತರ ಪತ್ರಿಕೆಯ ಛಾಯಾ ಪ್ರತಿ ಪಡೆಯಲು ಹಾಗೂ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಉತ್ತರ ಪತ್ರಿಕೆಯ ಛಾಯಾ ಪ್ರತಿ ಪಡೆದವರಿಗೆ ಮಾತ್ರ ಮರು ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಲಾಗಿದೆ. ಉತ್ತರ ಪತ್ರಿಕೆಯ ಛಾಯಾಪ್ರತಿ ಪಡೆದ ನಂತರ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವುದು.

ಫಲಿತಾಂಶ ಪ್ರಕಟವಾದ 15 ದಿನಗಳ ಒಳಗೆ ಅಂಕಗಳ ಮರು ಎಣಿಕೆಗೆ ಅಥವಾ ಛಾಯಾಪ್ರತಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಪ್ರವೇಶ ಪತ್ರದ ನಕಲು ಪ್ರತಿಯನ್ನು ಲಗತ್ತಿಸಿ ಸಲ್ಲಿಸತಕ್ಕದ್ದು. ಪ್ರವೇಶ ಪತ್ರದ ನಕಲು ಪ್ರತಿಯನ್ನು ಲಗತ್ತಿಸದೇ ಸಲ್ಲಿಸಿದಲ್ಲಿ ಪರಿಗಣಿಸುವುದಿಲ್ಲ. ಉತ್ತರ ಪತ್ರಿಕೆಯ ಛಾಯಾ ಪ್ರತಿ ಪಡೆದ 07 ದಿನಗಳ ಒಳಗೆ ಮರು ಮೌಲ್ಯಮಾಪನಕ್ಕೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸತಕ್ಕದ್ದು. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

1) ಮರು ಎಣಿಕೆಗೆ ಪ್ರತಿ ವಿಷಯದಲ್ಲಿಯ **X,Y,Z ಉತ್ತರ ಪತ್ರಿಕೆಗಳಿಗೆ ಪ್ರತ್ಯೇಕವಾಗಿ ಶುಲ್ಕ** - 150/-ರೂಗಳು ಪಾವತಿಸುವುದು.
2) ಉತ್ತರ ಪತ್ರಿಕೆಯ ಛಾಯಾ ಪ್ರತಿಯ ಪ್ರತಿ ವಿಷಯದಲ್ಲಿಯ **X,Y,Z** ಉತ್ತರ ಪತ್ರಿಕೆಗಳಿಗೆ ಪ್ರತ್ಯೇಕವಾಗಿ ಶುಲ್ಕ 300 ರೂ.ಗಳಂತೆ ಪಾವತಿಸುವುದು.
3) ಮರು ಮೌಲ್ಯಮಾಪನಕ್ಕೆ ಪ್ರತಿ ವಿಷಯದಲ್ಲಿಯ **X,Y,Z** ಉತ್ತರ ಪತ್ರಿಕೆಗಳಿಗೆ ಪ್ರತ್ಯೇಕವಾಗಿ ಶುಲ್ಕ 700 ರೂ.ಗಳಂತೆ ಪಾವತಿಸುವುದು.

ಸದರಿ ಶುಲ್ಕವನ್ನು ಕಾರ್ಯದರ್ಶಿಗಳು K.S.E.E.B. ಬೆಂಗಳೂರು ರವರಿಗೆ ಸಂದಾಯವಾಗುವಂತೆ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಹುಂಡಿಯನ್ನು (ಡಿ.ಡಿ) ಪಡೆದು ಸಲ್ಲಿಸುವುದು.

ಫಲಿತಾಂಶ ಪ್ರಕಟಣೆಯಲ್ಲಿ ತಪ್ಪಾಗಿದ್ದಲ್ಲಿ ಅಂತಹ ಪ್ರಕರಣಗಳನ್ನು ನಿಯಮಾನುಸಾರ ತಿದ್ದುಪಡಿ ಮಾಡಲು ಅಗತ್ಯ ದಾಖಲೆಗಳೊಂದಿಗೆ ಫಲಿತಾಂಶ ಪ್ರಕಟವಾದ 15 ದಿನಗಳೊಳಗೆ ಮಂಡಳಿಗೆ ಸಲ್ಲಿಸಿದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.
~~~~

**ವಿಶೇಷ ಸೂಚನೆ:–**

1. ವಾಣಿಜ್ಯ ವಿದ್ಯಾ ಸಂಸ್ಥೆಗಳಿಂದ ಪ್ರಾದೇಶಿಕ ಪರೀಕ್ಷಾ ಮಂಡಳಿಗೆ ಅಥವಾ ಕೇಂದ್ರ ಮಂಡಳಿಗೆ ಪತ್ರ ವ್ಯವಹರಿಸುವ ಪ್ರತಿಯೊಂದು ಪತ್ರದ ಮುಖಪುಟದಲ್ಲಿ ತಮ್ಮ ಸಂಸ್ಥೆಗೆ ನೀಡಿರುವ ಶಾಲೆಯ ಹೊಸ ಸಂಕೇತ ಸಂಖ್ಯೆಯನ್ನು ತಪ್ಪದೇ ನಮೂದಿಸುವುದು.
2. ಅಭ್ಯರ್ಥಿಗಳ ವೈಯುಕ್ತಿಕ ವಿವರಗಳಲ್ಲಿ ಲೋಪದೋಷ ಬದಲಾವಣೆಗಳಿದ್ದರೆ (ಸ್ಪೆಲಿಂಗ್/ಸರ್‌ನೇಮ್/ತಂದೆಯ ಹೆಸರು/ವಿಷಯ ಬದಲಾವಣೆ ಇತ್ಯಾದಿ) ದಿನಾಂಕ:10–10–2012ರೊಳಗೆ ಪರೀಕ್ಷಾ ಮಂಡಳಿಗೆ ಶ್ರೀ ಕೆ.ಎಂ. ಗುರುರಾಜ್, ಹಿರಿಯ ಸಹಾಯಕ ನಿರ್ದೇಶಕರು, (ವಾಣಿಜ್ಯ ಶಾಖೆ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿಗೆ ತಲುಪುವಂತೆ ಈಗಾಗಲೇ ಸಲ್ಲಿಸಿರುವ ಎನ್.ಆರ್ ಪ್ರತಿ ಮತ್ತು ಇತರೆ ದಾಖಲೆಗಳೊಂದಿಗೆ ಕಳುಹಿಸತಕ್ಕದ್ದು. ದಿನಾಂಕ: 10–10–2012ರ ಒಳಗೆ ಮಂಡಳಿಗೆ ವಿವರಗಳನ್ನು ಕಳುಹಿಸದೆ, ನಂತರ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಸಿದೆ.
3. ನಿಗದಿಪಡಿಸಿರುವ ದಿನಾಂಕದ ನಂತರ ಅಂಕಪಟ್ಟಿ/ಪ್ರಮಾಣ ಪತ್ರದಲ್ಲಿ ತಿದ್ದುಪಡಿಗಳನ್ನು ಕೋರಿದಲ್ಲಿ ರೂ. 100/– (ಒಂದುನೂರು ರೂಪಾಯಿಗಳು ಮಾತ್ರ) ದಂಡ ಶುಲ್ಕವನ್ನು ವಿಧಿಸಲಾಗುವುದು. ರೂ.100/–ರ ಹುಂಡಿಯನ್ನು ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರ ಹೆಸರಿಗೆ ಪಡೆದು ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.
4. ಉತ್ತೀರ್ಣರಾದ ವಿದ್ಯಾರ್ಥಿಗಳ ಅಂಕಪಟ್ಟಿಯನ್ನು 30 ದಿನಗಳ ಒಳಗಾಗಿ ಸಂಸ್ಥೆಗಳಿಗೆ ಕಳುಹಿಸಲಾಗುವುದು
5. ನಿಮ್ಮ ಸಂಸ್ಥೆಗೆ ಸಂಬಂಧಿಸದೇ ಇರುವ ಫಲಿತಾಂಶ ಪಟ್ಟಿ ಅಥವಾ ಅಂಕಪಟ್ಟಿಗಳು ಬಂದಲ್ಲಿ, 080–23360109 ದೂರವಾಣಿ ಮೂಲಕ ತಪ್ಪದೇ ಮಂಡಳಿಗೆ ತಿಳಿಸಿ, ಕೂಡಲೇ ಮಂಡಳಿಗೆ ತಪ್ಪದೇ ಹಿಂದಿರುಗಿಸಲು ಸೂಚಿಸಿದೆ.

(ಸಹಿ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಪ್ರತಿಯನ್ನು:–**

1) ರಾಜ್ಯದ ಎಲ್ಲಾ ವಾಣಿಜ್ಯ ಶಾಲೆಗಳ ಪ್ರಾಚಾರ್ಯರುಗಳಿಗೆ ಮುಂದಿನ ಕ್ರಮಕ್ಕಾಗಿ,
2) ರಾಜ್ಯದ ಎಲ್ಲಾ ವಿಭಾಗೀಯ ಮಟ್ಟದ ಪ್ರಾದೇಶಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಗಳಿಗೆ ಕ್ರಮಕ್ಕಾಗಿ,
3) ನಿರ್ದೇಶಕರು(ಇತರೆ ಪರೀಕ್ಷೆಗಳು)/ಕಾರ್ಯದರ್ಶಿಗಳ ಆಪ್ತ ಶಾಖೆಗೆ ಮಾಹಿತಿಗಾಗಿ,
4) ಶಾಖಾಧಿಕಾರಿಗಳು ಕಂಪ್ಯೂಟರ್ ಶಾಖೆರವರಿಗೆ ಮಂಡಳಿಯ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಅಗತ್ಯ ಕ್ರಮಕ್ಕಾಗಿ.
5) ಕಛೇರಿ ಪ್ರತಿ.

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು–03

ಸಂ: ಎಸ್1/ವಾ.ಪ/ಪ.ಕೇಂ.ಪ/77/ಡಿಸೆಂಬರ್2012/34/2012–13 ದಿನಾಂಕ: 03–09–2012

**<u>ಸುತ್ತೋಲೆ</u>**

**<u>ವಾಣಿಜ್ಯ ಪರೀಕ್ಷಾ ಕೇಂದ್ರಗಳ ಹೊಸ ಸಂಕೇತ(ಕೋಡ್) ಸಂಖ್ಯೆಗಳ ಪಟ್ಟಿ.</u>**

ಜೂನ್ 2012 ರಿಂದ ವಾಣಿಜ್ಯ ಪರೀಕ್ಷಾ ಕೇಂದ್ರಗಳ ಸಂಕೇತ ಸಂಖ್ಯೆಗಳನ್ನು ಪರಿಷ್ಕರಿಸಿ, ಹೊಸ ಪರೀಕ್ಷಾ ಸಂಕೇತ ಸಂಖ್ಯೆಗಳನ್ನು ನೀಡಲಾಗಿದೆ. ಹಳೆಯ ಪರೀಕ್ಷಾ ಕೇಂದ್ರಗಳ ಸಂಖ್ಯೆಗೆ ಬದಲಾಗಿ ನೀಡಿರುವ ಪರೀಕ್ಷಾ ಕೇಂದ್ರಗಳ **<u>ಹೊಸ ಸಂಕೇತಗಳನ್ನು ಎನ್.ಆರ್/ಓ.ಎಂ.ಆರ್ ಶೀಟ್‌ನ ನಿಗದಿತ ಅಂಕಣದಲ್ಲಿ ಸ್ಪಷ್ಟವಾಗಿ, ತಪ್ಪಿಲ್ಲದೇ ನಮೂದಿಸಿ ಕಳುಹಿಸಿಕೊಡುವುದು</u>**. ಇನ್ನು ಮುಂದೆ ಪರೀಕ್ಷಾ ಮಂಡಳಿಗೆ ವ್ಯವಹರಿಸುವಾಗ ಹೊಸ ಸಂಕೇತ ಸಂಖ್ಯೆಗಳನ್ನೇ ನಮೂದಿಸಲು ತಿಳಿಸಿದೆ. ಉಳಿದ ನಿಯಮಗಳು ಮುಂದುವರಿಯುತ್ತವೆ. ಹಳೆಕೋಡ್ ಸಂಖ್ಯೆ ಹೊಂದಿರುವ ಮತ್ತು ಹೊಸದಾಗಿ ಅನುಮತಿ ಪಡೆದು ಪ್ರಾರಂಭಿಸಿರುವ ಸಂಸ್ಥೆಗಳು ಮಂಡಳಿಯಿಂದ ಹೊಸಕೋಡ್ ನಂಬರ್‌ನ್ನು ಪಡೆದು ನಮೂದಿಸಿ ಸಲ್ಲಿಸುವುದು.

| ಕ್ರಮ ಸಂಖ್ಯೆ | ಪರೀಕ್ಷಾ ಕೇಂದ್ರದ ಹೊಸ ಸಂಕೇತ ಸಂಖ್ಯೆ | ಪರೀಕ್ಷಾ ಕೇಂದ್ರದ ಹೆಸರು | ಬೆರಳಚ್ಚು ಪರೀಕ್ಷಾ ಕೇಂದ್ರ | ಶೀಘ್ರಲಿಪಿ ಪರೀಕ್ಷಾ ಕೇಂದ್ರ |
|---|---|---|---|---|
| 1 | 01AN | ಕಾರ್ಪೊರೇಶನ್ ಬಾಲಕಿಯರ ಪ್ರೌಢಶಾಲೆ, ಗಾಂಧಿನಗರ, ಬೆಂಗಳೂರು. | ಇದೆ | |
| 2 | 02AN | ಸರ್ಕಾರಿ ಪ್ರೌಢಶಾಲೆ, ರಾಜಾಜಿನಗರ 2ನೇ ಸ್ಟೇಜ್, (ರೂರಲ್ ಡಯಟ್ ಹಿಂಭಾಗ) ಆರ್.ಟಿ.ಓ ಕಛೇರಿ ಪಕ್ಕ, ಬೆಂಗಳೂರು. | ಇದೆ | |
| 3 | 03AN | ಕಾರ್ಪೊರೇಶನ್ ಪ್ರೌಢಶಾಲೆ, ಕೋದಂಡರಾಮಪುರ, ಸಾಯಿಬಾಬ ದೇವಸ್ಥಾನದ ಹತ್ತಿರ, ಮಲ್ಲೇಶ್ವರಂ, ಬೆಂಗಳೂರು. | ಇದೆ | |
| 4 | 04AN | ಸರ್ಕಾರಿ ಹೆಣ್ಣುಮಕ್ಕಳ ಕಿರಿಯ ಕಾಲೇಜು, ನ್ಯೂ ವಾಣಿವಿಲಾಸ ಮಿನರ್ವ ಸರ್ಕಲ್‌ನ ಹತ್ತಿರ, ವಿ.ವಿ. ಪುರಂ, ಬೆಂಗಳೂರು–4. | ಇದೆ | |
| 5 | 05AN | ಸರ್ಕಾರಿ ಕಿರಿಯ ಕಾಲೇಜು, ಶಿವನಗರ(ಶಿವನಹಳ್ಳಿ) ರಾಜಾಜಿನಗರ, ಬೆಂಗಳೂರು | ಇದೆ | |
| 6 | 06AN | ಸರ್ಕಾರಿ ಪ್ರೌಢಶಾಲೆ, ಪೋಲೀಸ್ ಕಾಲೋನಿ, ಮಾಗಡಿ ರೋಡ್, ಟೋಲ್‌ಗೇಟ್ ಹತ್ತಿರ, ಬೆಂಗಳೂರು–23. | ಇದೆ | |
| 7 | 07AN | ಕಾರ್ಪೊರೇಶನ್ ಪದವಿ ಪೂರ್ವ ಕಾಲೇಜು, ಟಾಸ್ಕರ್ ಟೌನ್, ಡಿಸ್ಪೆನ್ಸರಿ ರಸ್ತೆ, ಶಿವಾಜಿನಗರ ಬಸ್ ಸ್ಟಾಂಡ್‌ನ ಹತ್ತಿರ, ಬೆಂಗಳೂರು. | ಇದೆ | |
| 8 | 09AN | ಡಯಟ್ ರೂರಲ್, ಆರ್ ಟಿ ಓ ಕಛೇರಿ ಪಕ್ಕ, ರಾಜಾಜಿನಗರ, ಬೆಂಗಳೂರು. | – | ಇದೆ |
| 09 | 01 AS | ರಾಣಿಸರಳಾದೇವಿ ಪ್ರೌಢಶಾಲೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು | ಇದೆ | |
| 10 | 02 AS | ಸರ್ಕಾರಿ ಮಾಡಲ್ ಪ್ರೈಮರಿ ಶಾಲೆ, ಹೊಸಹಳ್ಳಿ, ವಿಜಯನಗರ, ಬೆಂಗಳೂರು. | ಇದೆ | |
| 11 | 03 AS | ಸರ್ಕಾರಿ ಮುದ್ರಣಾಲಯ ಆರ್.ವಿ ಕಾಲೇಜು ಅಂಚೆ, ಮೈಸೂರು ರಸ್ತೆ, ಬೆಂಗಳೂರು | ಮುದ್ರಣ ಪರೀಕ್ಷೆಗಳು | |
| 12 | 01BA | ಸರ್ಕಾರಿ ಉರ್ದು ಸಂಯುಕ್ತ ಪ್ರೌಢಶಾಲೆ, ರಾಮನಗರ ಟೌನ್, ರಾಮನಗರ. | ಇದೆ | |
| 13 | 01CA | ಸರ್ಕಾರಿ ಪ್ರೌಢ ಶಾಲೆ, ಬಿ.ಬಿ.ರಸ್ತೆ, ಚಿಕ್ಕಬಳ್ಳಾಪುರ. | ಇದೆ | |
| 14 | 01CC | ಮೆಥೋಡಿಸ್ಟ್ ಪ್ರೌಢಶಾಲೆ, ಹಳೆ ಬಸ್ ನಿಲ್ದಾಣದ ಹತ್ತಿರ, ಕೋಲಾರ. | ಇದೆ | ಇದೆ |
| 15 | 02CC | ಸರ್ಕಾರಿ ಪದವಿ ಪೂರ್ವ ಕಾಲೇಜು,(ಬಾಲಕರ) ರಾಬರ್ಟಸನ್ ಪೇಟೆ, ಕೆಜಿ ಎಫ್, ಕೋಲಾರ ಜಿಲ್ಲೆ | ಇದೆ | |
| 16 | 01DD | ಆರ್ಯನ್ ಪ್ರೌಢಶಾಲೆ, ಜೆ.ಸಿ.ರಸ್ತೆ, ತುಮಕೂರು. | ಇದೆ | |
| 17 | 01DA | ಸರ್ಕಾರಿ ಪ್ರೌಢ ಶಾಲೆ, ಉಪನಿರ್ದೇಶಕರ ಕಛೇರಿ ಎದುರು, ಮದುಗಿರಿ, ತುಮಕೂರು ಜಿಲ್ಲೆ. | ಇದೆ | |
| 18 | 01EE | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ಹೆಣ್ಣುಮಕ್ಕಳ) ಎನ್ ಆರ್ ಮೊಹಲ್ಲಾ, ಅಶೋಕ ರಸ್ತೆ, ಮೈಸೂರು. | ಇದೆ | |
| 19 | 02EE | ಮಹಾರಾಜ ಪಿ.ಯು ಕಾಲೇಜು, ಜೆ.ಎಲ್.ಬಿ ರಸ್ತೆ, ಮೈಸೂರು. | ಇದೆ | ಇದೆ |
| 20 | 01EA | ಆದರ್ಶ ವಿದ್ಯಾಲಯ ಕಸ್ತೂರ್ ಬಾ ವಿದ್ಯಾರ್ಥಿನಿಲಯ ಕಟ್ಟಡ, ಡಯಟ್ ಹಿಂಭಾಗ, ಸತ್ಯಮಂಗಲ ರಸ್ತೆ, ಚಾಮರಾಜನಗರ. | ಇದೆ | |
| 21 | 01FF | ಸರ್ಕಾರಿ ಪದವಿ ಪೂರ್ವ ಕಾಲೇಜು, (ಬಾಲಕಿಯರ) ಸ್ಟೋನ್ ಬಿಲ್ಡಿಂಗ್, ಮಂಡ್ಯ | ಇದೆ | ಇದೆ |
| 22 | 01GG | ಸರ್ಕಾರಿ ಪದವಿ ಪೂರ್ವ ಕಾಲೇಜು,(ಬಾಲಕಿಯರ) ಬಲ್ಮಠ ಮಂಗಳೂರು ದ.ಕ. ಜಿಲ್ಲೆ. | ಇದೆ | ಇದೆ |
| 23 | 01GA | ಕ್ರಿಶ್ಚಿಯನ್ ಪ್ರೌಢಶಾಲೆ, ಉಡುಪಿ | ಇದೆ | |

| | | | | |
|---|---|---|---|---|
| 24 | 01HH | ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಮಡಿಕೇರಿ, ಕೊಡಗು ಜಿಲ್ಲೆ. | ಇದೆ | ಇದೆ |
| 25 | 01II | ಡಯಟ್ ಹೊಸ ಕಟ್ಟಡ ಜಡ್.ಪಿ. ಕಛೇರಿ ಎದುರು, ಸ್ಟೇಡಿಯಂ ರಸ್ತೆ, ಚಿತ್ರದುರ್ಗ. | ಇದೆ | |
| 26 | 01IA | ಸರ್ಕಾರಿ ಪದವಿ ಪೂರ್ವ ಕಾಲೇಜು,(ಬಾಲಕರ) ಪಿ.ಜೆ. ಎಕ್ಸ್ ಟೆನ್ಷನ್, ದಾವಣಗೆರೆ | ಇದೆ | ಇದೆ |
| 27 | 01JJ | ಸರ್ಕಾರಿ ಪದವಿ ಪೂರ್ವ ಕಾಲೇಜು, ಚಿಕ್ಕಮಗಳೂರು | ಇದೆ | ಇದೆ |
| 28 | 01KK | ಸರ್ಕಾರಿ ಪದವಿ ಪೂರ್ವ ಕಾಲೇಜು, ಬಿಹೆಚ್ ರಸ್ತೆ, ಶಿವಮೊಗ್ಗ | ಇದೆ | ಇದೆ |
| 29 | 02KK | ಸರ್ಕಾರಿ ಪದವಿ ಪೂರ್ವ ಕಾಲೇಜು, ಟಿ.ಕೆ ರಸ್ತೆ, ಓಲ್ಡ್ ಟೌನ್, ಭದ್ರಾವತಿ. | ಇದೆ | |
| 30 | 03KK | ಸರ್ಕಾರಿ ಪದವಿ ಪೂರ್ವ ಕಾಲೇಜು, ಸಾಗರ, ಶಿವಮೊಗ್ಗ ಜಿಲ್ಲೆ. | ಇದೆ | |
| 31 | 01LL | ಸರ್ಕಾರಿ ಉರ್ದು ಪ್ರೌಢಶಾಲೆ, ಎವಿಕೆ ಕಾಲೇಜಿನ ಹತ್ತಿರ, ಹಾಸನ. | ಇದೆ | ಇದೆ |
| 32 | 01MM | ಬಾಸೆಲ್ ಮಿಶನ್ ಸರ್ಕಾರಿ ಪದವಿ ಪೂರ್ವ ಕಾಲೇಜು, (ಪ್ರೌಢಶಾಲೆ ವಿಭಾಗ) ಧಾರವಾಡ ಜಿಲ್ಲೆ. | ಇದೆ | ಇದೆ |
| 33 | 02MM | ಶ್ರೀ ಜಗದ್ಗುರು ಗಂಗಾಧರ ಬಾಲಕರ ಪ್ರೌಢಶಾಲೆ, ಹುಬ್ಬಳ್ಳಿ, ಧಾರವಾಡ ಜಿಲ್ಲೆ | ಇದೆ | |
| 34 | 01MA | ಎಂ ಬಿ ಕೆ ಗುಪ್ತ ಸಂಯುಕ್ತ ಪ ಪೂ ಕಾಲೇಜು, ರಾಣಿಬೆನ್ನೂರು, ಹಾವೇರಿ ಜಿಲ್ಲೆ. | ಇದೆ | |
| 35 | 01MB | ಮುನಿಸಿಪಲ್ ಸರ್ಕಾರಿ ಪದವಿ ಪೂರ್ವ ಕಾಲೇಜು, ಗದಗ್ | ಇದೆ | |
| 36 | 01NN | ಸರ್ಕಾರಿ ಸರ್ದಾರ್ ಕಂಪೋಸಿಟ್ ಪದವಿ ಪೂರ್ವ ಕಾಲೇಜು, ಬೆಳಗಾಂ | ಇದೆ | ಇದೆ |
| 37 | 01NA | ಆರ್ ಡಿ ಕಾಲೇಜು, ಚಿಕ್ಕೋಡಿ | ಇದೆ | |
| 38 | 01OO | ಡಯಟ್, ಓಲ್ಡ್ ಬಿಲ್ಡಿಂಗ್, ಮನಗೋಲಿ ರಸ್ತೆ, ಬಿಜಾಪುರ | ಇದೆ | ಇದೆ |
| 39 | 01OA | ಸರ್ಕಾರಿ ಪಿ.ಬಿ. ಪದವಿ ಪೂರ್ವ ಕಾಲೇಜು(ಬಾಲಕರ) ಜಮಖಂಡಿ, ಬಾಗಲಕೋಟೆ ಜಿಲ್ಲೆ. | ಇದೆ | |
| 40 | 02OA | ಸರ್ಕಾರಿ ಪದವಿ ಪೂರ್ವ ಕಾಲೇಜು(ಬಾಲಕಿಯರ) ಬಾಗಲಕೋಟೆ | ಇದೆ | |
| 41 | 01PP | ಗಿಬ್ಸ್ ಬಾಲಕಿಯರ ಪ್ರೌಢಶಾಲೆ, ಕುಮಟಾ, ಕಾರವಾರ ಜಿಲ್ಲೆ. | ಇದೆ | |
| 42 | 02PP | ಸರ್ಕಾರಿ ಪ್ರೌಢಶಾಲೆ, ಕಾರವಾರ | ಇದೆ | ಇದೆ |
| 43 | 01QQ | ಸರ್ಕಾರಿ ಟಿಟಿಐ(ಬಾಲಕರ) ಪ್ರೌಢಶಾಲೆ ಕಟ್ಟಡ, ಐವಾನ್–ಎ–ಶಾಹಿ ರಸ್ತೆ. ಗುಲ್ಬರ್ಗ | ಇದೆ | ಇದೆ |
| 44 | 01QA | ಸರ್ಕಾರಿ ಪದವಿ ಪೂರ್ವ ಕಾಲೇಜು, ಯಾದಗಿರಿ | ಇದೆ | |
| 45 | 01RR | ಸರ್ಕಾರಿ ಪದವಿ ಪೂರ್ವ ಕಾಲೇಜು,(ಬಾಲಕಿಯರ) ರಾಯಚೂರು | ಇದೆ | |
| 46 | 01RA | ಸರ್ಕಾರಿ ಪದವಿ ಪೂರ್ವ ಕಾಲೇಜು,(ಬಾಲಕಿಯರ) ಗಂಗಾವತಿ, ಕೊಪ್ಪಳ ಜಿಲ್ಲೆ. | ಇದೆ | |
| 47 | 01SS | ಸರ್ಕಾರಿ ಪದವಿ ಪೂರ್ವ ಕಾಲೇಜು,(ಬಾಲಕರ) ಬೀದರ್ | ಇದೆ | |
| 48 | 01TT | ಸರ್ಕಾರಿ ಪ್ರೌಢ ಶಾಲೆ (ಬಾಲಕಿಯರ) ಮಾಜಿ ಪುರಸಭೆ ಕಟ್ಟಡ ಪಕ್ಕ, ಹೊಸಪೇಟೆ, ಬಳ್ಳಾರಿ ಜಿಲ್ಲೆ. | ಇದೆ | |
| 49 | 02TT | ಸರ್ಕಾರಿ ಪದವಿ ಪೂರ್ವ ಕಾಲೇಜು,(ಬಾಲಕಿಯರ) ರೈಲ್ವೆ ಸ್ಟೇಶನ್ ಹತ್ತಿರ, ಬಳ್ಳಾರಿ | ಇದೆ | ಇದೆ |

**ಸೂಚನೆ:–** ಶೀಘ್ರಲಿಪಿಯಲ್ಲಿ 05 ವಿದ್ಯಾರ್ಥಿಗಳಿಗಿಂತ ಕಡಿಮೆ ಇದ್ದಲ್ಲಿ ಪಕ್ಕದ ಜಿಲ್ಲಾ ಕೇಂದ್ರಕ್ಕೆ ಬದಲಾಯಿಸಲಾಗುವುದು.

–ಸಹಿ–
ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಪ್ರತಿಯನ್ನು:–**

1) ರಾಜ್ಯದ ಎಲ್ಲಾ ಪ್ರಾಂಶುಪಾಲರು ವಾಣಿಜ್ಯ ಸಂಸ್ಥೆಗಳು, ತುರ್ತು ಮತ್ತು ಅಗತ್ಯ ಕ್ರಮಕ್ಕಾಗಿ ರವಾನಿಸಿದೆ.
2) ಶಾಖಾಧಿಕಾರಿಗಳು ಕಂಪ್ಯೂಟರ್ ಶಾಖೆರವರಿಗೆ ಮಂಡಳಿಯ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.